# ದಿನಾಂಕ 05/01/2019ರಂದು ವಾರ್ಡ್ 18ರ ವಾರ್ಡ್ ಕಮಿಟಿಯ ಸಭೆಯ ನಡವಳಿಕೆಗಳು

## ಉಪಸ್ಥಿತರು ಕಮಿಟಿ ಸದಸ್ಯರು ಹಾಗು ಅಧಿಕಾರಿ/ನೌಕರರು

ಶ್ರೀ ಎಂ. ಆನಂದ್ ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನಗರ ಪಾಲಿಕೆ ಸದಸ್ಯರು.

ಶ್ರೀ. ನಾಗರಾಜು, ಸಹಾಯಕ ಕಂದಾಯ ಅಧಿಕಾರಿ (ಹೆಬ್ಬಾಳ) ಕಾರ್ಯದರ್ಶಿ.

ಶ್ರೀ ರಮರಾಜುಪುರೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಹೆಬ್ಬಾಳ.

ಶ್ರೀ ರಂಗಣ್ಣ ಸಹಾಯಕ ಅಭಿಯಂತರರು ವಾರ್ಡ್ –18 ಹೆಬ್ಬಾಳ

ಶ್ರೀ ಶಿವಶಂಕರ್ ಎನ್. ವಾರ್ಡ್ ಕಮಿಟಿ ಸದಸ್ಯರು.

ಶ್ರೀ ಶ್ರೀನಿವಾಸ್ ವಾರ್ಡ್ ಕಮಿಟಿ ಸದಸ್ಯರು.

ಶ್ರೀಮತಿ. ಪದ್ಮ ವಾರ್ಡ್ ಕಮಿಟಿ ಸದಸ್ಯರು

ಶ್ರೀಮತಿ. ರೂಪ ವಾರ್ಡ್ ಕಮಿಟಿ ಸದಸ್ಯರು.

ಶ್ರೀಮತಿ ಸಾವಿತ್ರಮ್ಮ, ವಾರ್ಡ್ ಕಮಿಟಿ ಸದಸ್ಯರು.

ಜಲದರ್ಶಿನಿ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು.

ಅಂಬೇಡ್ಕರ್ ಸಂಘ, ವಾರ್ಡ್ ಕಮಿಟಿ ಸದಸ್ಯರು. ನಾಗಶೆಟ್ಟಿಹಳ್ಳಿ

ಶ್ರೀ ಎನ್. ಪ್ರಶಾಂತ್ ವಾರ್ಡ್ ಕಮಿಟಿ ಸದಸ್ಯರು.

ಶ್ರೀ ಇಂದ್ರಹಾಸ್ ವಾರ್ಡ್ ಕಮಿಟಿ ಸದಸ್ಯರು.

ಶ್ರೀ ಶಿವಣ್ಣ ಜಿ.ಆರ್ ವಾರ್ಡ್ ಕಮಿಟಿ ಸದಸ್ಯರು.

ಪ್ರಾರಂಭಿಕವಾಗಿ ಸಭೆಯನ್ನು ಉದ್ದೇಶಿಸಿ ಸಹಾಯಕ ಕಂದಾಯ ಅಧಿಕಾರಿ(ಹೆಬ್ಬಾಳ)ರವರು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸದಸ್ಯರು, ಕಮಿಟಿ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಸಭೆಯ ಅಧ್ಯಕ್ಷರು, ಸದಸ್ಯರು, ಕಮಿಟಿ ಸದಸ್ಯರ ಮತ್ತು ಅಧಿಕಾರಿ ನೌಕರರುಗಳ ಸ್ವ–ಪರಿಚಯ ಮಾಡಿಕೊಡಲಾಯಿತು.

ವಾರ್ಡಿನ ಅಧ್ಯಕ್ಷರು ಮಾತನಾಡುತ್ತಾ, ಮೊದಲಿಗೆ ವಾರ್ಡಿನಲ್ಲಿ ಅಭಿವೃದ್ಧಿಯಾಗಬೇಕಾಗಿರುವ ವಿಷಯಗಳ ಈ ಕೆಳಗಿನ ಅಂಶಗಳ ಬಗ್ಗೆ ಚರ್ಚಿಸಲಾಯಿತು.

- ಹೆಚ್. ಐ.ಜಿ ಕಾಲೋನಿಗೆ ಬೃಹತ್ ನೀರು ಕಾಲುವೆ (ಡ್ರೈನೇಜ್) ಗೆ ಇಂದಿರಾ ಕ್ಯಾಂಟೀನ್ ಗಲೀಜು ನೀರು ಬಿಡುತ್ತಿದ್ದು, ಕಾಲುವೆಯಲ್ಲಿ ವಾಸನೆ ಬರುತ್ತಿದ್ದು, ಸ್ವಚ್ಛತೆ ಕಾಪಾಡಲು ಆರ್.ಎಂ.ವಿ ಅಸೋಸಿಯೇಷನ್ ಶ್ರೀ ರಾಮುಲು ರವರು ಮಾನ್ಯ ಅಧ್ಯಕ್ಷರಿಗೆ ತಿಳಿಸಿದರು. ಹಾಗೂ ಸಾರ್ವಜನಿಕರು ಬೃಹತ್ ನೀರು ಕಾಲುವೆ (ಡ್ರೈನೇಜ್) ಗೆ ಕಸದ ಪ್ಲಾಸ್ಟಿಕ್ ಕವರ್‌ಗಳನ್ನು ಎಸೆಯುತ್ತಿರುವುದಾಗಿ ತಿಳಿಸಿದರು, ಆದಕಾರಣ ಸಿಸಿ ಕ್ಯಾಮರಾವನ್ನು ಅಳವಡಿಸುವುದಾಗಿ ಆರ್.ಎಂ.ವಿ ಅಸೋಸಿಯೇಷನ್ ರವರಿಗೆ ಮಾನ್ಯ ಅಧ್ಯಕ್ಷರು ರವರಿಗೆ ತಿಳಿಸಿದರು.

- ಲೊಟ್ಟೆಗೊಲ್ಲಹಳ್ಳಿ ಇಂದಿರಾ ಕ್ಯಾಂಟೀನ್ ಡ್ರೈನೇಜ್ ನೀರು ಸ್ಟರ್ಲಿಂಗ್ ಅಪಾರ್ಟ್‌ಮೆಂಟ್‌ಗೆ ನುಗ್ಗುತ್ತಿದ್ದು ತಳ ಮಹಡಿಯಲ್ಲಿ ತೇವಾಂಶ ಹೆಚ್ಚಾಗಿರುವುದಾಗಿ ಸ್ಟರ್ಲಿಂಗ್ ಅಪಾರ್ಟ್‌ಮೆಂಟ್ ರವರು ತಿಳಿಸಿದಾಗ ಇಂದಿರಾ ಕ್ಯಾಂಟೀನ್ ವ್ಯವಸ್ಥಾಪಕರಿಗೆ ಮಾನ್ಯ ಅಧ್ಯಕ್ಷರು ಇದನ್ನು ತಡೆಗಟ್ಟಲು ತಿಳಿಸಿದರು.
- ನ್ಯಾಯಾಂಗ ಬಡಾವಣೆ ಪಾರ್ಕ್‌ನಲ್ಲಿ Gym Equipments ಗಳನ್ನು ಅಳವಡಿಸಲು ಸಹಾಯಕ ಅಭಿಯಂತರರು ರವರಿಗೆ ಮಾನ್ಯ ಅಧ್ಯಕ್ಷರು ತಿಳಿಸಿದರು.
- ವಾರ್ಡ್‌ನ ಬುಲೆ ಪಾರ್ಕ್ ಪಕ್ಕದಲ್ಲಿ ಯೋಗ ಕ್ಲಾಸ್ ನಡೆಸಲು ಕೊಠಡಿಗಳನ್ನು ನಿರ್ಮಿಸಲು ಟೆಂಡರ್ ಕರೆದಿದ್ದು, ಕಾಮಗಾರಿಯನ್ನು ಅತಿ ಶೀಘ್ರದಲ್ಲಿ ಕೈಗೆತ್ತಿಗೊಳ್ಳಲಾಗುವುದೆಂದು ಆರ್.ಎಂ.ವಿ ಅಸೋಸಿಯೇಷನ್ ರವರಿಗೆ ಮಾನ್ಯ ಅಧ್ಯಕ್ಷರು ತಿಳಿಸಿದರು.
- ಗೆದ್ದಲಹಳ್ಳಿ ಹಾಗೂ ಎ.ಇ.ಸಿ.ಎಸ್. ಲೇಔಟ್‌ನಲ್ಲಿ ನಾಯಿಗಳ ಸಂತಾನ ಹರಣ ಚಿಕಿತ್ಸೆಯನ್ನು ನೀಡಿ ಅದೇ ಜಾಗದಲ್ಲಿ ನಾಯಿಗಳನ್ನು ಬಿಡುತ್ತಿದ್ದು ಹಾಗೂ ಸ್ಮಶಾನ ರಸ್ತೆಯಲ್ಲಿ ಒಂದು ವಿದ್ಯುತ್ ಕಂಬ ಅಳವಡಿಸಲು ಹಾಗೂ Childern Park ರಸ್ತೆಯನ್ನು Street light ಹಾಕಿಸಲು ಕೆ.ಇ.ಬಿ. ರವರಿಗೆ ತಿಳಿಸಲಾಯಿತು.
- ಜಲದರ್ಶಿನಿ ಲೇಔಟ್ ಅಸೋಸಿಯೇಷನ್ ರವರು ಮಾತನಾಡಿ ಪಾರ್ಕ್‌ನಲ್ಲಿ ಕೆಲವು ಸಾರ್ವಜನಿಕರು ಕಸ ಎಸೆಯುತ್ತಿರುವುದಾಗಿ ಮತ್ತು ಮರದ ಎಲೆಗಳು ಉದುರುತ್ತಿದ್ದು ಪಾರ್ಕ್‌ನ ಸ್ವಚ್ಛತೆ ಕಾಪಾಡಲು ಆರೋಗ್ಯ ವಿಭಾಗದ ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ತಿಳಿಸಿದರು.
- ಅರಣ್ಯ ಇಲಾಖೆರವರು ಸಭೆಗೆ ಗೈರು ಹಾಜರಾಗಿರುವುದರಿಂದ ನೋಟೀಸ್ ನೀಡಲು ಸಹಾಯಕ ಕಂದಾಯ ಅಧಿಕಾರಿ (ಹೆಬ್ಬಾಳ) ಉಪವಿಭಾಗರವರಿಗೆ ಮಾನ್ಯ ಅಧ್ಯಕ್ಷರು ತಿಳಿಸಿದರು.
- ಹೆಚ್.ಎ.ವಿ ಬಡಾವಣೆ ಖಾಲಿ ರಸ್ತೆಯಲ್ಲಿ ಸುಮಾರು 11 ಗಂಟೆಯ ಮೇಲೆ ಕುಡಿದು ಬಾಟಲ್‌ಗಳನ್ನು ರಸ್ತೆಯಲ್ಲಿ ಎಸೆಯುತ್ತಿದ್ದು ತೊಂದರೆಯುಂಟಾಗಿರುವುದಾಗಿ ಆರ್.ಎಂ.ವಿ ಅಸೋಸಿಯೇಷನ್ ರವರು ತಿಳಿಸಿದಾಗ ಇದನ್ನು ತಡೆಗಟ್ಟಲು ಮತ್ತು ಸಿ.ಸಿ. ಕ್ಯಾಮರ ಅಳವಡಿಸಲು ಪೊಲೀಸ್ ಇಲಾಖೆಯವರಿಗೆ ಸೂಚಿಸಿರುವುದಾಗಿ ಮಾನ್ಯ ಅಧ್ಯಕ್ಷರು ಆರ್.ಎಂ.ವಿ ಅಸೋಸಿಯೇಷನ್ ರವರಿಗೆ ತಿಳಿಸಿದರು
- ಆರೋಗ್ಯ ಇಲಾಖೆಯವರಾದ ಆರೋಗ್ಯ ಪರಿವೀಕ್ಷಕರು ರವರಿಗೆ ಪ್ಲಾಸ್ಟಿಕ್ ಬ್ಯಾನ್ ಮಾಡದ ಅಂಗಡಿ ಮಾಲೀಕರಿಗೆ ನೋಟೀಸ್ ನೀಡಿ ದಂಡ ವಸೂಲಿ ಮಾಡಲು ತಿಳಿಸಿದರು.
- ವಾರ್ಡ್‌ನ ಪ್ರಮುಖ ರಸ್ತೆಗಳಲ್ಲಿ ಗೇಲ್ ಆಫ್ ಇಂಡಿಯ (ಗ್ಯಾಸ್ ಕಂಪನಿ) ರವರು ರಸ್ತೆ ಹಗೆದಿದ್ದು ಇದುವರೆವಿಗೂ ಜಲ್ಲಿ ಮತ್ತು ಡಾಂಬರ್ ಹಾಕಿಸದೆ ಇರುವುದು ಕಂಡು ಮಾನ್ಯ ಅಧ್ಯಕ್ಷರು ಅಸಮಧಾನ ವ್ಯಕ್ತಪಡಿಸಿ. ಕೂಡಲೆ ರಸ್ತೆಯನ್ನು ಮುಚ್ಚಿ ಡಾಂಬರ್ ಹಾಕಿಸಲು ಗೇಲ್ ಆಫ್ ಇಂಡಿಯ (ಗ್ಯಾಸ್ ಕಂಪನಿ) ರವರಿಗೆ ತಿಳಿಸಿದರು.
- ಅಂಜನ ಮೂರ್ತಿ ಲೇಔಟ್ ಲೊಟ್ಟೆಗೊಲ್ಲಹಳ್ಳಿ ರಸ್ತೆಯಲ್ಲಿ ಕೋಳಿ ಅಂಗಡಿ ಹತ್ತಿರ ಕಸ ಎಸೆಯುವುದನ್ನು ತಡೆಗಟ್ಟಲು ಬಿಬಿಎಂಪಿ ವತಿಯಿಂದ ಮಾರ್ಷಲ್ ರವರನ್ನು ಬಿಡಲು ಆರೋಗ್ಯ ಇಲಾಖೆಯವರಿಗೆ ತಿಳಿಸಿದರು.

- ವಾರ್ಡ್‌ನ ಸಿ.ಐ.ಎಲ್ ಬಡಾವಣೆ ಹಾಗೂ ನಾಯ್ಡು ಲೇಔಟ್ ರಸ್ತೆಗಳಲ್ಲಿ ಮರದ ಕೊಂಬೆಗಳನ್ನು ಕತ್ತರಿಸಿ ಕೊಂಬೆಗಳನ್ನು ತೆರವುಗೊಳಿಸದೆ ರಸ್ತೆಗಳಲ್ಲಿ ಬಿಟ್ಟುಹೋಗಿರುವ ಕಾರಣ ಕೆ.ಇ.ಬಿ ರವರಿಗೆ ಕೂಡಲೆ ತೆರವುಗೊಳಿಸಲು ತಿಳಿಸಿದರು.

ಈ ಮೇಲ್ಕಂಡ ಎಲ್ಲಾ ಅಂಶಗಳು ಕಾರ್ಯರೂಪಕ್ಕೆ ಬಂದಿರುವ ಬಗ್ಗೆ ಹಾಗೂ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಲು ಹಾಗೂ ಈ ಸಭೆಯಲ್ಲಿ ಏನೂ ನಿರ್ಣಯಗಳು ಇಲ್ಲದಿರುವುದರಿಂದ ಸದರಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಂದಾಯ ಅಧಿಕಾರಿ ಹಾಗೂ
ವಾರ್ಡ್ ಕಮಿಟಿ ಕಾರ್ಯದರ್ಶಿ (18)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಕೌನ್ಸಿಲ್ ಕಾರ್ಯಾಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು(ಪೂರ್ವ)ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು(ಪೂರ್ವ)ರವರ ಅವಗಾಹನೆಗೆ ಸಲ್ಲಿಸಿದೆ.
5. ಕಂದಾಯ ಅಧಿಕಾರಿ(ಹೆಬ್ಬಾಳ)ರವರ ಅವಗಾಹನೆಗೆ.
6. ಕಂದಾಯ ಪರಿವೀಕ್ಷಕರು/ಮೌಲ್ಯ ಮಾಪಕರು ವಾರ್ಡ್–27.